**ಓ.ಎಸ್. ನಂಬರ್ : 24/2019**
**ಪಿ .ಡಬ್ಲ್ಯೂ : 2**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 07.03.2026

**ಮುಂದುವರೆದ ಪಾಟೀ ಸವಾಲು : 1 ನೇ ಪ್ರತಿವಾದಿಯ ಪರವಾಗಿ ಶ್ರೀ ವಕೀಲರಿಂದ :**

ಸರ್ವೆ ನಂಬರ್ 135/1 ರಿಂದ ನಿಡಿ-2 ಪ್ರಕಾರ ಹಲವಾರು ಜನರಿಗೆ ಆಸ್ತಿಯನ್ನು ಮಾರಾಟ ಮಾಡಿ ವಿಂಗಡಣೆ ಮಾಡಲಾಗಿದೆ ಅಂದರೆ ಸರಿ. ಮದ್ದೂರಮ್ಮ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. 1979-2001 ರ ಜಮಾಬಂಧಿ ಯಲ್ಲಿ ಜಯಶೀಲ ಮತ್ತು ನನ್ನ ತಾಯಿ ಯಶೋಧ ಹೆಸರು ಇದೆ ಅಂದರೆ ಸರಿ. ಸದರಿ ದಾಖಲಾತಿಯನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ದಾಖಲೆ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ದಾಖಲೆ ಪ್ರಕಾರ ನನ್ನ ತಂದೆ ತಾಯಿ ಹೆಸರಿಗೆ ವರ್ಗಾವಣೆಯಾಗುವ ಸಮಯದಲ್ಲಿ ಅದೇ ಸರ್ವೆ ನಂಬರ್ ನಲ್ಲಿ ಬೇರೆ ಬೇರೆ ಹೆಸರಿಗೆ ವರ್ಗಾವಣೆ ಯಾಗಿದೆ ಅಂದರೆ ಸರಿ. ಸದರಿ ದಾಖಲಾತಿ ಪ್ರಕಾರ 1999-2000 ನೇ ಇಸವಿಯಲ್ಲಿ ನನ್ನ ತಂದೆ ತಾಯಿ ಹೆಸರಿಗೆ ವರ್ಗಾವಣೆಯಾಗಿದೆ ಅಂದರೆ ಸರಿ. ಸರ್ವೆ ನಂಬರ್ 135/1 ರಲ್ಲಿ 66 ಸೆಂಟ್ ಅನ್ನು ನನ್ನಅಜ್ಜ ತೀರಿಹೋದ ನಂತರ ನನ್ನ ತಂದೆ ತಾಯಿ ಹೆಸರಿಗೆ ಪೌತಿ ಖಾತೆ ಆಗಿದೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿರುತ್ತೀರಾ ಅಂದರೆ ಹೇಳಿರುತ್ತೇನೆ ಎನ್ನುತ್ತಾರೆ. ದಾವಾ ಸ್ವತ್ತು ವಿಭಾಗ ಆಗಿಲ್ಲ ಎಂದು ಹೇಳುತ್ತಿದ್ದು ನನ್ನ ತಂದೆ ಅವರ ಕುಟುಂಬಸ್ಥರ ನಡುವೆ ವಿಭಾಗ ಕೇಳಿರುತ್ತಾರಾ ಅಂದರೆ 2012 ರಲ್ಲಿ

ಕೇಳಿರುತ್ತಾರೆ ಎನ್ನುತ್ತಾರೆ. ವಿಭಾಗ ಆಗಬೇಕೆಂದು ನನ್ನ ತಂದೆ ಯಾರ ಹತ್ತಿರ ಕೇಳಿರುತ್ತಾರೆ ಅಂದರೆ 1ನೇ ಪ್ರತಿವಾದಿ ಹಾಗೂ ಕುಟುಂಬಸ್ಥರ ನಡುವೆ ಕೇಳಿರುತ್ತಾರೆ ಎನ್ನುತ್ತಾರೆ. ಅದು ಯಾವಾಗ ಗೊತ್ತಾ ಅಂದರೆ 2012 ಆದರೆ ದಿನಾಂಕ ತಿಂಗಳು ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಕುಟುಂಬದ ಆಸ್ತಿಯು ವಿಭಾಗ ಕೋರಿ ನೋಟೀಸ್ಸು ಕೊಟ್ಟಿರುತ್ತಾರೋ ಇಲ್ಲವೋ ನನಗೆ ಮಾಹಿತಿ ಇಲ್ಲ.

ನನ್ನ ತಂದೆ ತೀರಿಹೋಗಿ 5 ವರ್ಷಗಳಾಗಿದೆ. ಅವರು ತೀರಿಹೋದ ನಂತರ 5 ವರ್ಷದ ಅವಧಿಯಲ್ಲಿ ಯಾವ ಯಾವ ಸರ್ವೆ ನಂಬರ್ ಎಷ್ಟು ವಿಸ್ತೀರ್ಣದ ಆಸ್ತಿ ಯಾರು ಯಾರಿಗೆ ವರ್ಗಾವಣೆಯಾಗಿದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಅಂದರೆ ಮಾಡಬಹುದು ಎನ್ನುತ್ತಾರೆ.

ನನ್ನ ವಾದ ಪತ್ರದ ಖಂಡಿಕೆ 1 ರಲ್ಲಿ ಸರ್ವೆ ನಂಬರ್ 135/1 ರಲ್ಲಿ 5 ಎಕರೆ 91 ಸೆಂಟ್ ಎಂದು ತೋರಿಸಿದ್ದು ಅದಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲಾತಿಯನ್ನು ಹಾಜರುಪಡಿಸುತ್ತೀರಾ ಅಂದರೆ ಅದರಲ್ಲಿ 6.57 ಎಕರೆ ಇದ್ದು ತಪ್ಪಾಗಿ ಮುದ್ರಣವಾಗಿದೆ ಎನ್ನುತ್ತಾರೆ. ಸದರಿ ವಿಚಾರವನ್ನು ತೋರಿಸಲು ದಾಖಲಾತಿಯನ್ನು ಹಾಜರುಪಡಿಸುತ್ತೀರಾ ಅಂದರೆ ಮಾಡುತ್ತೇನೆ ಎನ್ನುತ್ತಾರೆ. ವಾದ ಪತ್ರದ ಐಟಂ ನಂಬರ್ ಎ ರಲ್ಲಿ 135/1 ರಲ್ಲಿ ಪೂರ್ಣ ಆಸ್ತಿ ಬೇರೆಯವರಿಗೆ ಮಾರಾಟ ಮಾಡಲಾಗಿದೆ ಪ್ರತಿವಾದಿ 5 ರಿಂದ 127 ಹಾಗೂ ಇತರರು ಅದರಲ್ಲಿ ಸ್ವಾಧೀನದಲ್ಲಿ ಇದ್ದಾರೆ ಅಂದರೆ ಅದರಲ್ಲಿ ಉಳಿಕೆ ಜಾಗ ಇದೆ ಎನ್ನುತ್ತಾರೆ.

ನನ್ನ ತಂದೆಯ ಮರಣ ನಂತರ ಸರ್ವೆ ನಂಬರ್ 135/1 ರ ಆಸ್ತಿಯನ್ನು

ಸರ್ವೆ ಮಾಡಿದ್ದೀರಾ ಅಂದರೆ ಇಲ್ಲ ಎನ್ನುತ್ತಾರೆ. ಜಾಗ ನೋಡಿದ್ದೇನೆ ಎನ್ನುತ್ತಾರೆ. ನಾನು ಯಾವುದೇ ಜಾಗವನ್ನು ನೋಡಿಲ್ಲ ಸದರಿ ಆಸ್ತಿ ಪೂರ್ಣ ವಿಲೇವಾರಿಯಾಗಿದೆ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-37 ರಿಂದ ನಿಪಿ-39 ಹಾಗೂ ನಿಪಿ-53 ರಿಂದ ನಿಪಿ-62 ರ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಗಳು ತನ್ನ ಸ್ವಾಧೀನದಲ್ಲಿ ಇರುವ ಆಸ್ತಿಗೆ ತಂತಿ ಬೇಲಿಯನ್ನು ಹಾಕಿಸಿಕೊಂಡಿರುತ್ತಾರೆ ಅಂದರೆ ಸರಿಯಲ್ಲ.

ನಿಪಿ-54 ರಿಂದ 58 ರ ದಾಖಲಾತಿಗಳನ್ನು ಯಾರು ತೆಗೆದಿರುತ್ತೀರಾ ಅಂದರೆ ನಾನೇ ತೆಗೆದಿರುತ್ತ್ೇನೆ ಎನ್ನುತ್ತಾರೆ. ದಾವಾ ಚಾಲ್ತಿಯಲ್ಲಿದ್ದು ತಡೆಯಾಜ್ಞೆ ಇದ್ದರೂ ಸಹ ಪ್ರತಿವಾದಿಗಳು ಜಮೀನು ಅನ್ನು ಮಟ್ಟ ಮಾಡುತ್ತಿದ್ದಾಗ ನಾನು ತೆಗೆದಿರುತ್ತೇನೆ. ತೆಗೆದ ದಿನಾಂಕ ನನಗೆ ನೆನಪಿರುವುದಿಲ್ಲ. ಸದರಿ ದಾಖಲಾತಿಗಳು ಸರ್ವೆ ನಂಬರ್ 133/1 ಪಿ 111 ರ 0.50 ಸೆಂಟ್ಸ್ ಗೆ ಸಂಬಂಧಪಟ್ಟಿದ್ದು ಎನ್ನುತ್ತಾರೆ. ಸದರಿ ಛಾಯ ಚಿತ್ರಗಳು ಸರ್ವೇ ನಂಬರ್ 133/1 ಪಿ111 ಗೆ ಸಂಬಂಧಪಟ್ಟಿದ್ದು ಎಂದು ತೋರಿಸಲು ದಾಖಲಾತಿ ಇದೆಯಾ ಅಂದರೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಸದರಿ ಛಾಯ ಚಿತ್ರಗಳನ್ನು ಶುಂಠಿಕೊಪ್ಪದ ಸ್ಟುಡೀಯೋದಲ್ಲಿ ಪ್ರಿಂಟ್ ತೆಗೆಸಿರುತ್ತ್ೇನೆ. ಅವರಿಂದ ನಾನು ರಶೀದಿ ಪಡೆದಿಲ್ಲ. ನಿಪಿ-59 ಅನ್ನು ಮಂಗಳೂರಿನಲ್ಲಿ ಮಾಡಿಸಿರುತ್ತೇನೆ. ನಿಪಿ-54 ರಿಂದ 59 ರ ದಾಖಲಾತಿಗಳು ಸರ್ವೆ ನಂಬರ್ 133/1 ಪಿ 111 ಕ್ಕೆ ಸಂಬಂಧಪಟ್ಟಿದಲ್ಲ ಅಂದರೆ ಸರಿಯಲ್ಲ. ಸದರಿ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿಪಿ-54 ರಿಂದ 59 ರ

ದಾಖಲಾತಿಗಳನ್ನು ಪುಷ್ಟೀಕರಿಸಲು ನಾನು ಮತ್ತು ನನ್ನ ತಾಯಿ ನಿಪಿ-60 ರಿಂದ 62 ಅನ್ನು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ನಿಪಿ-60 ರಲ್ಲಿ ಪೊಲೀಸ್ ಸಹಿ ಇಲ್ಲ ಅಂದರೆ ಸರಿಯಲ್ಲ. ನಿಪಿ-61 ಮತ್ತು 62 ಜೆರಾಕ್ಸ್ ಪ್ರತಿಗಳು ಅಂದರೆ ಸರಿ. ಮೂಲ ಪ್ರತಿ ಇದೆ ಎನ್ನುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋಗದಿದ್ದರೂ ನಿಪಿ-61 ಮತ್ತು 62 ರ ದಾಖಲಾತಿಗಳನ್ನು ಸೃಷ್ಟಿಸಿದ್ದೇನೆ ಅಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ**
**ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
***ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,***
***ಸೋಮವಾರಪೇಟೆ.***